ಹುಣಸೂರು ತಾಲ್ಲೂಕಿನ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ

1989 (2612) ಶ್ರೀ ಪಾಪಣ್ಣ ಎ. (ಹುಣಸೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಣಸೂರು ತಾಲ್ಲೂಕಿನ ಕೆಲವು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ವೈದ್ಯರ ನೇಮಕಾತಿ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಹುಣಸೂರು ಜನರಲ್ ಆಸ್ಪತ್ರೆಗೆ 1909-2000 ಸಾಲಿಗೆ ಎಷ್ಟು ಹಣದ ಔಷಧಿ ನಿಗದಿ ಪಡಿಸಲಾಗಿದೆ? ಎಷ್ಟು ಸರಬರಾಜು ಆಗಿದೆ? ಪೂರ್ಣ ಸರಬರಾಜು ಆಗದೇ ಇರಲು ಕಾರಣವೇನು;

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ. 573 ವೈದ್ಯರ ಹುದ್ದೆಗಳ ನೇಮಕಾತಿ ಕಾರ್ಯ ಪ್ರಕ್ರಿಯೆಯಲ್ಲಿದ್ದು ಇವರ ನೇಮಕಾತಿ ಸಮಯದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಹುಣಸೂರು ಜನರಲ್ ಆಸ್ಪತ್ರೆಗೆ ಒಟ್ಟು ಅನುದಾನ ರೂ.3.00 ಲಕ್ಷ. ಈ ಅನುದಾನದ ಶೇಕಡ 40 ರಷ್ಟು ಅಂದರೆ ರೂ.1.20 ಲಕ್ಷದಲ್ಲಿ ಇದುವರೆಗೆ ಈ ಮೊತ್ತದ ಸಂಪೂರ್ಣ ಔಷಧಿಗಳನ್ನು ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರು, ಇಲ್ಲಿಂದ ಸರಬರಾಜು ಮಾಡಲಾಗಿದೆ. ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮೈಸೂರು, ಇವರು ಶೇ.60 ಭಾಗದಲ್ಲಿ 1.30 ಮೊತ್ತದ ಔಷಧಿಯನ್ನು ಸರಬರಾಜು ಮಾಡಿರುತ್ತಾರೆ.

ಹುಣಸೂರು ತಾಲ್ಲೂಕಿನಲ್ಲಿ ಕಾಲರಾ

1990 (2613) ಶ್ರೀ ವಿ.ಪಾಪಣ್ಣ (ಹುಣಸೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಣಸೂರು ತಾಲ್ಲೂಕಿನಾದ್ಯಂತ ಕಾಲರಾ ಬೇನೆ ಹರಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ. ಹುಣಸೂರು ತಾಲ್ಲೂಕಿನಲ್ಲಿರುವ ಸಿಂಗರ ಮಾರನಹಳ್ಳಿಯಲ್ಲಿ ಕರಳು ಬೇನೆ ಪ್ರಕರಣಗಳು ವರದಿಯಾಗಿದೆ.

ಆ) : ಕರಳು ಬೇನೆ ನಿಯಂತ್ರಣಕ್ಕಾಗಿ :-

1. ಸಂಬಂಧಪಟ್ಟ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಸ್ಥಳಕ್ಕೆ ಬೇಟಿ ನೀಡಿ ಎಲ್ಲಾ ಮುಂಜಾಗ್ರತಾ ಕ್ರಮವನ್ನು ಕೈಗೊಂಡಿದ್ದಾರೆ.
2. ರೋಗಿಗಳ ಮಲ ಪರೀಕ್ಷೆ ನಡೆಸಿದಾಗ ಇದೂ ಕಾಲರಾ ಅಲ್ಲವೆಂದೂ ಕರಳುಬೇನೆ ಪ್ರಕರಣಗಳೆಂದು ತಿಳಿದು ಬಂದಿದೆ.
3. ರೋಗದ ಲಕ್ಷಣಗಳು ಇದ್ದ ಸಂಶಯುಕ್ತ ಎಲ್ಲಾ ರೋಗಿಗಳ ಮನೆಯವರಿಗೂ ಸುತ್ತಮುತ್ತಲಿನ ಜನರಿಗೂ ಚಿಕಿತ್ಸೆಯನ್ನು ನೀಡಲಾಗಿದೆ.
4. ಓ.ಆರ್.ಎಸ್. ಪೊಟ್ಟಣಗಳನ್ನು ವಿತರಿಸಲಾಗಿದೆ.
5. ಸದರಿ ಗ್ರಾಮದಲ್ಲಿ ಶಾಶ್ವತಿಕ ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಿದ್ದು, ಚಿಕಿತ್ಸೆ ನೀಡಲಾಗುತ್ತಿದೆ.
6. ಜನರಿಗೆ ಮುಂಜಾಗ್ರತಾ ಕ್ರಮವಾಗಿ ಕಾದಾರಿದಾ ನೀರನ್ನು ಕುಡಿಯಲು ತಿಳಿಸಲಾಗಿದೆ.
7. ಸದರಿ ಗ್ರಾಮಕ್ಕೆ ತಾಲ್ಲೂಕು ನಿರ್ವಾಹಣಾಧಿಕಾರಿಗಳು ಹುಣಸೂರು ಇವರ ಬೇಟಿ ನೀಡಿ, ಗ್ರಾಮಕ್ಕೆ ಬರಲಿ ಕುಡಿಯುವ ನೀರು ವ್ಯವಸ್ಥೆ ಮಾಡಿರುತ್ತಾರೆ.
8. ಗ್ರಾಮ ಪಂಚಾಯಿತಿಗೆ ಶುದ್ಧ ನೀರಿನ ಸರಬರಾಜು ಮತ್ತು ನೈರ್ಮಲೀಕರಣದ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.
9. ಈಗ ಪರಿಸ್ಥಿತಿಯು ಹತೋಟಿಯಲ್ಲಿರುತ್ತದೆ.

ದ.ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯಿತಿ ಕಟ್ಟಡ ಕುರಿತು

1991 (2331) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಗ್ರಾಮೋಣಾಭಿವೃದ್ಧಿ ಪಂಚಾಯತ್ ರಾಜ್ ಸಂಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದ.ಕ.ಜಿಲ್ಲೆಯ ಜಿಲ್ಲಾ ಪಂಚಾಯತ್ ಕಟ್ಟಡದ ಒಟ್ಟು ಅಂದಾಜು ವೆಚ್ಚ ಎಷ್ಟು; ನೂತನ ಕಟ್ಟಡಕ್ಕಾಗಿ ನಿಗದಿಪಡಿಸಿರುವ ಜಮೀನಿನ ವಿಸ್ತೀರ್ಣ ಎಷ್ಟು;

ಆ) ಸದರಿ ಕಾಮಗಾರಿಯನ್ನು ಎಂದು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು;

ಇ) ಕಟ್ಟಡಕ್ಕೆ ಬಿಡುಗಡೆ ಮಾಡುವ ಅನುದಾನದ ಮೊತ್ತ ಎಷ್ಟು;

ಈ) ಕಾಲಮಿತಿ ಅನ್ವಯ ಅದನ್ನು ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆಯೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ದ.ಕ.ಜಿಲ್ಲಾ ಪಂಚಾಯತ್ ಕಟ್ಟಡಕ್ಕೆ ಒಟ್ಟು ಅಂದಾಜು ವೆಚ್ಚ ರೂ.138 ಲಕ್ಷಗಳು ಇರುತ್ತದೆ. ನೂತನ ಕಟ್ಟಡಕ್ಕಾಗಿ ನಿಗದಿಪಡಿಸಿರುವ ಜಮೀನಿನ ವಿಸ್ತೀರ್ಣ 2.25 ಎಕರೆ ಆಗಿರುತ್ತದೆ.